ಕರ್ನಾಟಕ ವಿಧಾನಸಭೆ

ಸೋಮವಾರ ೧೮ನೇ ಮಾರ್ಚ್ ೨೦೦೨ರಂದು ಸದನವು ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧ ಗಂಟೆ ೦೦ ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರಾದ ಶ್ರೀ ಎಂ.ವಿ.ವೆಂಕಟಪ್ಪ ಅವರು ಪೀಠದಲ್ಲಿ ಉಪಸ್ಥಿತರಿದ್ದರು.

ಸಂತಾಪ ಸೂಚನೆಗಳು

ವಿಷಯ: ಲೋಕಸಭಾಧ್ಯಕ್ಷರಾಗಿದ್ದ ಶ್ರೀ ಜಿ.ಎಂ.ಸಿ.ಬಾಲಯೋಗಿ ಮತ್ತು ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎನ್.ಶಿವರಾವ್ ಅವರ ನಿಧನಕ್ಕೆ ಸಂತಾಪ ಸೂಚಿಸುವುದು.

ಅಧ್ಯಕ್ಷರು:- ಲೋಕಸಭೆಯ ಹಾಲಿ ಅಧ್ಯಕ್ಷರಾಗಿದ್ದ ಶ್ರೀ ಜಿ.ಎಂ.ಸಿ.ಬಾಲಯೋಗಿ ಹಾಗೂ ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎನ್.ಶಿವರಾವ್ ಅವರುಗಳು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸುತ್ತಿದ್ದೇನೆ.

ಲೋಕಸಭೆಯ ಹಾಲಿ ಅಧ್ಯಕ್ಷರಾಗಿದ್ದ ಶ್ರೀ ಗಂಟಿ ಮೋಹನ ಚಂದ್ರ ಬಾಲಯೋಗಿ ಅವರು ೧ನೇ ಅಕ್ಟೋಬರ್, ೧೯೫೧ರಂದು ಆಂಧ್ರಪ್ರದೇಶದ ಪೂರ್ವ ಗೋದಾವರಿ ಜಿಲ್ಲೆ ಎಡುರುಲಂಕಾ ಗ್ರಾಮದಲ್ಲಿ ಜನಿಸಿದ್ದು ವಕೀಲ ವೃತ್ತಿಯ ಜೊತೆಗೆ ಸಾಮಾಜಿಕ ಸೇವಾ ಕಾರ್ಯಕರ್ತರಾಗಿದ್ದರು.

ಪೂರ್ವ ಗೋದಾವರಿ ಜಿಲ್ಲೆಯ ಜಿಲ್ಲಾ ಪ್ರಜಾ ಪರಿಷತ್ತಿನ ಅಧ್ಯಕ್ಷರಾಗಿ ೧೯೮೭ರಲ್ಲಿ ಆಯ್ಕೆಯಾದ ಶ್ರೀಯುತರು ೧೯೯೧ರಲ್ಲಿ ಪ್ರಥಮ ಬಾರಿಗೆ ಆಂಧ್ರ ಪ್ರದೇಶದ ಅಮಲಾಪುರಂ ಕ್ಷೇತ್ರದಿಂದ ಹತ್ತನೇ ಲೋಕಸಭೆಗೆ ಚುನಾಯಿತರಾಗಿದ್ದರು. ೧೯೯೬ ರಿಂದ ೯೮ರವರೆಗೆ ಆಂಧ್ರಪ್ರದೇಶ ವಿಧಾನಸಭೆಯ ಸದಸ್ಯರಾಗಿ ಹಾಗೂ ಉನ್ನತ ಶಿಕ್ಷಣ ಸಚಿವರಾಗಿ ಕಾರ್ಯ ನಿರ್ವಹಿಸಿದ್ದ ಶ್ರೀಯುತರು ಹನ್ನೆರಡನೇ ಲೋಕಸಭೆಗೆ ೧೯೯೮ರಲ್ಲಿ ಮತ್ತೆ ಆಯ್ಕೆಯಾಗಿ, ಲೋಕಸಭೆಯ ಅಧ್ಯಕ್ಷರಾಗಿದ್ದರು. ನಂತರ ೧೯೯೯ರಲ್ಲಿ ಮೂರನೇ ಬಾರಿಗೆ ಹದಿಮೂರನೇ ಲೋಕಸಭೆಗೆ ಪುನರಾಯ್ಕೆಯಾದ ಶ್ರೀ ಬಾಲಯೋಗಿ ಅವರು ಎರಡನೇ ಬಾರಿಗೆ ಲೋಕಸಭೆಯ ಅಧ್ಯಕ್ಷರಾಗಿ ಆಯ್ಕೆಯಾದರು.

ಕಳೆದ ಒಂದೂವರೆ ದಶಕದಲ್ಲಿ ಪಂಚಾಯ್ತಿಯಿಂದ ಲೋಕಸಭೆಯ ಅಧ್ಯಕ್ಷ ಸ್ಥಾನದವರೆಗೆ ನಡೆದು ಬಂದ ದಾರಿ ಅವರ ಕರ್ತೃತ್ವ ಶಕ್ತಿಗೆ ಒಂದು ಉದಾಹರಣೆ.

ವಿನಮ್ರಭಾವ, ಸೌಜನ್ಯಶೀಲ ವ್ಯಕ್ತಿತ್ವ ಮತ್ತು ಸೌಮ್ಯ ಮಾತುಗಳ ಸಾಕಾರಮೂರ್ತಿಯಾಗಿದ್ದ ಶ್ರೀ ಬಾಲಯೋಗಿ ಅವರು ಅತ್ಯಂತ ಸಂದಿಗ್ಧ ಸನ್ನಿವೇಶದಲ್ಲಿ ಲೋಕಸಭೆಯ ಅಧ್ಯಕ್ಷರಾಗಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದ್ದರು. ಸಂಸತ್ತು ಹಾಗೂ ಶಾಸನ ಸಭೆಗಳಲ್ಲಿ ಕಲಾಪಗಳು ಸುಗಮವಾಗಿ ಹಾಗೂ ಶಿಸ್ತಿನಿಂದ ನಡೆಯುವಂತಾಗಲು ವಿಧಾನಮಂಡಲಗಳ ಅಧ್ಯಕ್ಷರುಗಳ ಸಮಾವೇಶ ಕರೆದು, ನೀತಿ ಸಂಹಿತೆಯನ್ನು ರೂಪಿಸಿ, ಅದಕ್ಕೆ ಎಲ್ಲಾ ಪಕ್ಷಗಳ ಧುರೀಣರ ಬದ್ಧತೆಯನ್ನು ಪಡೆದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ.

ಸಂಸತ್ ಹಾಗೂ ಶಾಸನಸಭೆಗಳ ಕಾರ್ಯಕಲಾಪಕ್ಕೆ ಶ್ರೀ ಬಾಲಯೋಗಿ ಸಲ್ಲಿಸಿದ ಸೇವೆ ಅತ್ಯಂತ ಸ್ಮರಣಾರ್ಹವಾದುದು.

ಶ್ರೀಯುತರು ದಿನಾಂಕ ೩-೩-೨೦೦೨ ರಂದು ನಿಧನ ಹೊಂದಿದರು.

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎನ್.ಶಿವರಾವ್ ಅವರು ೨೦ನೇ ಅಕ್ಟೋಬರ್, ೧೯೩೨ರಂದು ದಕ್ಷಿಣ ಕನ್ನಡ ಜಿಲ್ಲೆಯ ನಂದಾವರದಲ್ಲಿ ಜನಿಸಿದ್ದು ವೃತ್ತಿಯಲ್ಲಿ ಕೃಷಿಕರಾಗಿದ್ದರು. ರಾಜಕೀಯ ಕ್ಷೇತ್ರದಲ್ಲಿ ಹಾಗೂ ಸಹಕಾರ ಕ್ಷೇತ್ರದಲ್ಲಿ ಹೆಚ್ಚಿನ ಆಸಕ್ತಿವಹಿಸಿದ್ದ ಶ್ರೀಯುತರು ಏಳನೇ ವಿಧಾನಸಭೆಗೆ ಬಂಟ್ವಾಳ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ದಿನಾಂಕ ೫-೨-೨೦೦೨ರಂದು ನಿಧನ ಹೊಂದಿದರು.

+ ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, ಲೋಕಸಭೆಯ ಗೌರವಾನ್ವಿತ ಅಧ್ಯಕ್ಷರಾಗಿದ್ದ ಶ್ರೀ ಬಾಲಯೋಗಿಯವರ ಅಕಾಲಿಕ ನಿಧನ ನಮಗೆಲ್ಲರಿಗೂ ಬಹಳ ವ್ಯಸನವನ್ನು ಉಂಟು ಮಾಡಿದೆ. ಶ್ರೀ ಬಾಲಯೋಗಿಯವರು ತಮ್ಮ ಸಾರ್ವಜನಿಕ ಜೀವನದಲ್ಲಿ ಅವರು ಕ್ರಮಿಸಿದ ದಾರಿಯನ್ನು ತಾವು ಸಭೆಯ ಗಮನಕ್ಕೆ ತಂದಿದ್ದೀರಿ. ಪಂಚಾಯತ್ ಮಟ್ಟದಲ್ಲಿ ಕೆಲಸ ಮಾಡಿ ನಂತರ ಜಿಲ್ಲಾ ಮಟ್ಟದಲ್ಲಿ, ನಂತರ ರಾಜ್ಯ ಮಟ್ಟದಲ್ಲಿ, ಅಂತಿಮವಾಗಿ ಜನತಂತ್ರ ವ್ಯವಸ್ಥೆಯಲ್ಲಿನ ಅತ್ಯಂತ ಪ್ರತಿಷ್ಠಿತವಾದಂಥ ಲೋಕಸಭಾ ಅಧ್ಯಕ್ಷರ ಸ್ಥಾನವನ್ನು ಅಲಂಕರಿಸತಕ್ಕಂಥ ಅವಕಾಶ ನೂರು ಕೋಟಿ ಜನ ಸಮುದಾಯವಿರುವ ನಮ್ಮಲ್ಲಿ ಕೇವಲ ನಾಲ್ಕಾರು ಜನಗಳಿಗೆ ಮಾತ್ರ ಅದು ದಕ್ಕುತ್ತದೆ. ಯಾವ ಸ್ಥಾನದಲ್ಲಿ ನಾವು ಮಾವಳಂಕರ್‌ರವರನ್ನು ನೋಡಿದ್ದೆವೋ, ಯಾವ ಸ್ಥಾನದಲ್ಲಿ ನೀಲಂಸಂಜೀವ್ ರೆಡ್ಡಿಯವರನ್ನು ನಾವು ಕಂಡಿದ್ದೆವೋ, ಅಂಥ ಸ್ಥಾನದಲ್ಲಿ ಶ್ರೀ ಬಾಲಯೋಗಿಯವರನ್ನು ತೆಲುಗು ದೇಶಂ ಪಕ್ಷ ನಾಮಕರಣ ಮಾಡಿದಾಗ, ಅವರ ವಿಚಾರ ಅವರ ಆಚಾರದ ಬಗ್ಗೆ ನಮಗೆಲ್ಲರಿಗೂ ಕೂಡ ಸಾಕಾದಷ್ಟು ತಿಳುವಳಿಕೆ ಇರಲಿಲ್ಲ. ಇವರು ನಿರೀಕ್ಷೆಯ ಮಟ್ಟಕ್ಕೆ ಏರತಕ್ಕಂಥ

ಬುದ್ಧಿ ಪ್ರಾವೀಣ್ಯತೆಯನ್ನು ಪಡೆಯುತ್ತಾರೋ ಇಲ್ಲವೋ ಎನ್ನತಕ್ಕಂಥ ಅನುಮಾನಗಳ ಸುಳಿ ಅವರನ್ನು ಹೊಂದಿಕೊಂಡೇ ಇತ್ತು. ಆದರೆ, ದಿವಸಗಳು ಕಳೆದಂತೆ ಲೋಕಸಭೆ ಬಹಳ ಗೊಂದಲಮಯವಾದಂಥ ಸನ್ನಿವೇಶಗಳನ್ನು ಎದುರಿಸಲಿಕ್ಕೆ ತಮ್ಮನ್ನು ತಾವೇ ಮಾನಸಿಕವಾಗಿ ಸಜ್ಜುಗೊಳಿಸಲಿಕ್ಕೆ ಶ್ರೀ ಬಾಲಯೋಗಿಯವರು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿದರು. ತಾವೇ ಈಗಾಗಲೇ ವಿವರಿಸಿದ ಹಾಗೆ ನಮ್ಮ ಪ್ರಜಾಸತ್ತಾತ್ಮಕ ಚೌಕಟ್ಟಿನಲ್ಲಿ ಲೋಕಸಭೆ, ವಿಧಾನ ಸಭೆಗಳು, ಹೇಗೆ ತಾವೇ ನಿಯಂತ್ರಿಸಿರುವ ಚೌಕಟ್ಟಿನಲ್ಲಿ ತಮ್ಮ ಕಾರ್ಯಾಭಾರಗಳನ್ನು ಮುಂದುವರಿಸಬೇಕು ಎನ್ನತಕ್ಕಂಥ ಒಂದು ವಿಹಂಗಮ ದೃಷ್ಟಿಯನ್ನು ಅವರು ಅಳವಡಿಸಲಿಕ್ಕೆ ಪ್ರಯತ್ನ ಪಟ್ಟರು ಎನ್ನತಕ್ಕಂಥದ್ದನ್ನು ಬಹಳ ಅಭಿಮಾನದಿಂದ ನಾವು ಸ್ಮರಿಸಬೇಕಾಗಿದೆ. ಪ್ರಧಾನ ಮಂತ್ರಿಗಳ ವಿರೋಧ ಪಕ್ಷದ ನಾಯಕರ, ವಿವಿಧ ರಾಜಕೀಯ ಪಕ್ಷದ ಮುಖಂಡರುಗಳ, ಎಲ್ಲಾ ವಿಧಾನ ಸಭೆಯ ಅಧ್ಯಕ್ಷರುಗಳ, ವಿಧಾನ ಪರಿಷತ್ತಿನ ಅಧ್ಯಕ್ಷರುಗಳ ಸಭೆಯನ್ನು ಕರೆಯುವುದರ ಮೂಲಕ ನಮ್ಮ ಜನತಂತ್ರಕ್ಕೆ ಅಂಟಿರತಕ್ಕಂಥ ಕೆಲವು ಬೆಳವಣಿಗೆಗಳು ಹೇಗೆ ಅಹಿತಕರವಾದಂಥ ಬೆಳವಣಿಗೆಗಳು, ಈ ಬೆಳವಣಿಗೆಗಳನ್ನು ನಾವು ಆದಷ್ಟು ಶೀಘ್ರವಾಗಿ ಹತೋಟಿಯಲ್ಲಿ ತೆಗೆದುಕೊಳ್ಳಲಿಕ್ಕೆ ಬೇಕಾದಂಥ ಭೂಮಿಕೆಯನ್ನು ನಿರ್ಮಾಣ ಮಾಡಲು ಅವರು ಪ್ರಯತ್ನ ಪಟ್ಟರು, ಅವರ ಈ ಪ್ರಯತ್ನ ಸಾಕಾದಷ್ಟು ಯಶಸ್ಸನ್ನು ಪಡೆಯಿತು ಎನ್ನತಕ್ಕಂಥದ್ದು ಕಳೆದ ೪೦ ವರ್ಷಗಳಲ್ಲಿ ನಾನು ವಿಧಾನ ಸಭೆ ಮತ್ತು ಲೋಕ ಸಭೆ ಇವುಗಳು ನಡೆಯುತ್ತಿರತಕ್ಕಂಥ ರೀತಿನೀತಿಗಳನ್ನು ಗಮನಿಸಿದಾಗ, ಇತ್ತೀಚಿನ ದಿನಗಳಲ್ಲಿ ಆಗೊಮ್ಮೆ ಈಗೊಮ್ಮೆ ಪರಿಸ್ಥಿತಿ ನಿಭಾಯಿಸಲು ಸಾಧ್ಯವಾಗದ ರೀತಿಯಲ್ಲಿ ನಮ್ಮನ್ನು ಪ್ರಚೋದಿಸಿದರೂ ಕೂಡ ಅಂತಿಮವಾಗಿ, ಸದನಗಳನ್ನು ಸರಿಯಾದ ದಾರಿಯಲ್ಲಿ ನಡೆಸಿಕೊಂಡು, ಯೋಗ್ಯವಾದಂಥ ವಿವೇಕಯುತವಾದಂಥ ಚರ್ಚೆಗೆ ಮುಕ್ತವಾದಂಥ ಅವಕಾಶವನ್ನು ಕಲ್ಪಿಸುವುದರ ಮೂಲಕ ಜನಗಳ ದೃಷ್ಟಿಯಲ್ಲಿ ಜನಗಳ ಮುಂದೆ, ಒಂದು ಏನೇ ವಿವಾದಕ್ಕೆ ಒಳಗಾಗಿರುವ ವಿಚಾರಗಳು ಚರ್ಚೆ ಆಗಲಿಕ್ಕೆ ತಮ್ಮ ಪ್ರಯತ್ನಗಳನ್ನು ಮಾಡಿದರು. ದಲಿತ ಪ್ರಜ್ಞೆಯನ್ನು ಬುದ್ಧಿಪೂರ್ವಕವಾಗಿ ಮೈಗೂಡಿಸಿಕೊಂಡಿದ್ದರು ಎಂದು ತಾವು ಅತ್ಯಂತ ಎಲೋಕ್ವೆಂಟ್ ಆಗಿ ಬಾಲಯೋಗಿಯವರನ್ನು ತಾವು ಬಣ್ಣಿಸಿದ್ದೀರಿ. ದಲಿತ ವರ್ಗದಿಂದ ಮೇಲೆದ್ದು ಬಂದು ಇಡೀ ದೇಶದಲ್ಲಿ ಅದರಲ್ಲೂ ಅವರ ಕೊನೆಯ ದಿನಗಳಲ್ಲಿ ಕೊನೆಯ ತಿಂಗಳುಗಳಲ್ಲಿ ಅವರು ದೇಶದ ಅದ್ವಿತೀಯವಾದಂಥ ಸಭಾಧ್ಯಕ್ಷರಾಗಿ ಪರಿವರ್ತನೆಯಾದರು ಎನ್ನತಕ್ಕಂಥದ್ದನ್ನು ನಾವು ನೆನಪಿಸಿಕೊಳ್ಳಬೇಕಾಗಿದೆ. ಅವರನ್ನು ಕೆಲವರು ಸಾಕಾದಷ್ಟು ಹತ್ತಿರದಿಂದ ಬಲ್ಲವರಾಗಿದ್ದರೂ ಕೂಡ ಅವರ ಆಚಾರ-ವಿಚಾರಗಳ ಬಗ್ಗೆ ನಾವು ಅವರ ಮೇಲೆ ಅಗಾಧವಾದಂಥ ಗೌರವವನ್ನು ಇರಿಸಿಕೊಂಡಿದ್ದೆವು. ಶ್ರೀ ಬಾಲಯೋಗಿಯವರ ನಿಧನದಿಂದ ನಮ್ಮ ದೇಶದ ಸಾರ್ವಜನಿಕ ಜೀವನದಲ್ಲಿ ಒಂದು ದೊಡ್ಡ ಶೂನ್ಯ ಉಂಟಾಗಿದೆ. ಅವರ ಸಂಸ್ಕಾರಕ್ಕೆ ನಮ್ಮ ಪಕ್ಷದ ಪರವಾಗಿ ನಾವುಗಳು

ಅವರ ಊರಿಗೆ ಹೋದಾಗ ಅವರಿಗಿದ್ದಂಥ ಅಪಾರವಾದ ಜನಮನ್ನಣೆಯನ್ನು ನಾವು ಕಣ್ಣಾರೆ ಕಂಡೆವು. ಚುನಾವಣೆಗಳಲ್ಲಿ ಜಯ-ಅಪಜಯಗಳು ಪ್ರಸ್ತುತ ಆದರೂ ಕೂಡ ಒಬ್ಬ ಮನುಷ್ಯ ಸಾರ್ವಜನಿಕ ಜೀವನದಲ್ಲಿ ಮುಂಚೂಣಿಯಲ್ಲಿರುವ ಒಬ್ಬ ನಾಯಕ ಹೇಗೆ ಜೀವನ ನಡೆಸಿದ, ಆ ನಡೆಸಿದ ಜೀವನದ ಬಗ್ಗೆ ಸಾರ್ವಜನಿಕರಲ್ಲಿ ಎಂಥ ಸದ್ಭಾವನೆ ಪ್ರತಿಬಿಂಬಿತವಾಗುತ್ತಿತ್ತು ಎನ್ನುವುದಕ್ಕೆ ನಾವು ಅಲ್ಲಿ ಕಂಡ ದೊಡ್ಡ ಜನಸಂದಣಿ ಏನಿದೆ, ದೇಶದ ನಾನಾ ಭಾಗಗಳಿಂದ ಬಂದಂಥ ಮುಖಂಡರುಗಳ ಸಂಖ್ಯೆ ಹಾಗೂ ಆ ಮುಖಂಡರುಗಳ ಹೆಸರುಗಳನ್ನು ಗಮನಿಸಿದಾಗ ಶ್ರೀ ಬಾಲಯೋಗಿಯವರ ಬಗ್ಗೆ ಎಂಥ ಅಪಾರವಾದಂಥ ವಿಶ್ವಾಸವಿತ್ತು ಎನ್ನತಕ್ಕಂಥಾದ್ದು ನಮಗೆ ವ್ಯಕ್ತವಾಗುತ್ತದೆ. ಸದನದ ಪರವಾಗಿ ನನ್ನ ಗೌರವವನ್ನು ಈ ದಿವ್ಯ ಚೇತನಕ್ಕೆ ಸಲ್ಲಿಸುತ್ತಿದ್ದೇನೆ. ಹಾಗೆಯೇ ಈ ದಿವಸ ನಮ್ಮೆಲ್ಲರಿಂದ ಮತ್ತು ಸಾರ್ವಜನಿಕ ಜೀವನದಿಂದ ದೂರವಾಗಿರತಕ್ಕಂಥ ಶ್ರೀ ಎನ್.ಶಿವರಾವ್‌ರವರು ಈ ಸಭೆಯ ಸದಸ್ಯರಾಗಿದ್ದರು. ಹಾಗೆಯೇ ಸಹಕಾರ ಕ್ಷೇತ್ರದಲ್ಲಿಯೂ ಕೂಡ ಹೆಚ್ಚಿನ ಆಸಕ್ತಿಯನ್ನು ವಹಿಸಿದ್ದರು. ಶ್ರೀಯುತರು ನಿಧನರಾಗಿರತಕ್ಕಂಥದ್ದು ನಮಗೆ ದುಃಖವನ್ನು ತಂದಿದೆ. ಈ ಸಂದರ್ಭದಲ್ಲಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ.

+ ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು):- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಜಿ.ಎಂ.ಸಿ.ಬಾಲಯೋಗಿರವರು ಇವತ್ತಿನ ದಿವಸ ನಮ್ಮ ಮಧ್ಯದಲ್ಲಿ ಇಲ್ಲ ಎನ್ನತಕ್ಕಂಥದ್ದನ್ನು ನೆನಪಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ. ಅವರ ಒಂದು ರೂಪ ಮತ್ತು ಅವರ ಒಂದು ನಡವಳಿಕೆ ಇವತ್ತಿನ ದಿವಸ ನಮ್ಮ ಕಣ್ಣು ಮುಂದೆ ಇದೆ. ಸಣ್ಣ ವಯಸ್ಸಿನಲ್ಲಿ ಅಂದರೆ ಕೇವಲ ೪೭ನೇ ವಯಸ್ಸಿನಲ್ಲಿಯೇ ಲೋಕಸಭೆಯ ಸ್ಪೀಕರ್ ಆಗಿ ಆಯ್ಕೆಯಾದಂಥ ವ್ಯಕ್ತಿ ಅವರಾಗಿದ್ದರು. ಅದರಲ್ಲೂ ಕೆಳಹಂತದಿಂದ ಬಂದು ಹೋರಾಟದ ಮುಖಾಂತರ ಬಂದಂಥ ವ್ಯಕ್ತಿ ಶ್ರೀ ಬಾಲಯೋಗಿಯವರು ಶ್ರೀಯುತರು ಕೆಳಹಂತದಿಂದ ರಾಜಕಾರಣ ಮಾಡಿಕೊಂಡು ಹಳ್ಳಿಯಿಂದ ದೆಹಲಿಯವರೆಗೆ ಬೆಳೆದು ಬಂದಿರತಕ್ಕಂಥದ್ದು ಬಹುಶಃ ಎಲ್ಲಾ ರಾಜಕೀಯ ವ್ಯಕ್ತಿಗಳಿಗೆ ಮಾದರಿಯಾಗಿದೆ ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಶ್ರೀಯುತರು ಮೊದಲು ಐದು ವರ್ಷಗಳ ಕಾಲ ಜಿಲ್ಲಾ ಪಂಚಾಯತ್ ಅಧ್ಯಕ್ಷರಾಗಿ ಬಹಳ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದ್ದರು. ಅದರಲ್ಲೂ ದಲಿತ ಜನಾಂಗದಿಂದ ಬಂದಂಥ ಒಬ್ಬ ವ್ಯಕ್ತಿ ಜನಸಾಮಾನ್ಯರ ಜೊತೆ ಮತ್ತು ದೊಡ್ಡವರು ಹಾಗೂ ಸಣ್ಣವರ ಜೊತೆ ಮತ್ತು ಎಲ್ಲಾ ವರ್ಗಗಳವರ ಜೊತೆ ಸಂಪರ್ಕವನ್ನು ಇಟ್ಟುಕೊಂಡು ಬಹಳಷ್ಟು ಜನಪ್ರಿಯವಾದಂಥ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ತೊಡಗಿದಂಥ ಮಾನ್ಯ ಜಿ.ಎಂ.ಸಿ.ಬಾಲಯೋಗಿಯವರು ಲೋಕಸಭೆಯ ಸ್ಪೀಕರ್ ಸ್ಥಾನವನ್ನು ಪಡೆದುಕೊಂಡು ಬಹಳ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿರತಕ್ಕಂಥದ್ದು ಇವತ್ತಿನ ದಿವಸ ನಮ್ಮ ಕಣ್ಣಿನ

ಮುಂದೆ ಇದೆ. ಬಹುಶಃ ಶ್ರೀಯುತರು ಆ ಒಂದು ಅಧ್ಯಕ್ಷರ ಸ್ಥಾನಕ್ಕೆ ಆಯ್ಕೆಯಾದಂಥ ಸಂದರ್ಭದಲ್ಲಿ ರಾಜಕೀಯ ಮತ್ತು ಬೇರೆ ಬೇರೆ ರಂಗದಲ್ಲಿದ್ದಂಥ ಅನೇಕ ಜನರಿಗೆ ಮಾನ್ಯ ಬಾಲಯೋಗಿಯವರು ಯಾರು ಎಂಬುದಾಗಲಿ ಮತ್ತು ಅವರ ಹೆಸರನ್ನೂ ಸಹ ಯಾರೂ ಕೇಳಿರಲಿಲ್ಲ. ಆ ಸಂದರ್ಭದಲ್ಲಿ ದೆಹಲಿಯ ರಾಜಕಾರಣದಲ್ಲಿ ಅವರ ಹೆಸರೂ ಕೂಡ ಇರಲಿಲ್ಲ. ಹಾಗೆಯೇ ದೇಶದ ರಾಜಕೀಯದಲ್ಲಿಯೂ ಕೂಡ ಶ್ರೀಯುತರು ಮುಂಚೂಣಿಯಲ್ಲಿ ಇರಲಿಲ್ಲ. ಕೇವಲ ರಾಜ್ಯದಲ್ಲಿ ಮಾತ್ರ ರಾಜಕೀಯ ಮಾಡಿದಂಥ ವ್ಯಕ್ತಿ ದೆಹಲಿ ರಾಜಕಾರಣದಲ್ಲಿ ಅದರಲ್ಲಿಯೂ ಕೂಡ ಸ್ಪೀಕರ್ ಸ್ಥಾನಕ್ಕೆ ಆಯ್ಕೆ ಆಗುತ್ತಾರೆ ಎಂದಾಗ, ಆ ಸ್ಥಾನವನ್ನು ಯಾವ ರೀತಿಯಾಗಿ ನಿಭಾಯಿಸುತ್ತಾರೆ ಎನ್ನತಕ್ಕಂಥ ಮುಜುಗರ ಬಹಳಷ್ಟು ಜನರಲ್ಲಿ ಇತ್ತು. ಆದರೆ, ನಾವು ನೋಡುತ್ತಾ ನೋಡುತ್ತಾ ಇದ್ದಂತೆಯೇ ಆ ಒಂದು ಕಾರ್ಯವನ್ನು ನಿರ್ವಹಿಸುವುದರಲ್ಲಿ ಸಾಕಷ್ಟು ಎಫಿಶಿಯೆನ್ಸಿಯನ್ನು ಅವರು ತೋರಿಸಿದ್ದರು. ಶ್ರೀಯುತರು ಈ ಒಂದು ಸ್ಥಾನವನ್ನು ಯಾವರೀತಿಯಾಗಿ ನಿಭಾಯಿಸಿಕೊಂಡು ಹೋಗುತ್ತಾರೆ ಎನ್ನತಕ್ಕಂಥ ಅಭಿಪ್ರಾಯವನ್ನು ಶ್ರೀ ಚಂದ್ರಬಾಬು ನಾಯ್ಡುರವರು ವ್ಯಕ್ತಪಡಿಸಿದ್ದಕ್ಕೆ "Dont worry Sir, I will prove myself" ಎಂದು ಮಾನ್ಯ ಬಾಲಯೋಗಿಯವರು ಹೇಳಿದರಂತೆ. ಮೊನ್ನೆ ದಿವಸ ಮಾನ್ಯ ಚಂದ್ರಬಾಬುನಾಯ್ಡುರವರು ಒಂದು ಆರ್ಟಿಕಲ್‌ನಲ್ಲಿ ಈ ವಿಷಯವನ್ನು ತಿಳಿಸಿರತಕ್ಕಂಥದ್ದನ್ನು ನಾನು ಓದಿದ್ದೇನೆ. ನೀವೇನೂ ಹೆದರಬೇಡಿ, ಆ ಪೋಸ್ಟ್‌ನ್ನು ನಾನು ನಿಭಾಯಿಸಿಕೊಂಡು ಹೋಗುತ್ತೇನೆಂದು ಶ್ರೀಯುತರು ಹೇಳಿದ್ದರು. ಇವತ್ತಿನ ದಿವಸ ಅಧ್ಯಕ್ಷರ ಸ್ಥಾನ ಬಹಳ ಮಹತ್ವವಾದದ್ದು ಮತ್ತು ಅಲ್ಲಿ ಕಾರ್ಯ ನಿರ್ವಹಿಸಿಕೊಂಡು ಹೋಗತಕ್ಕಂಥದ್ದು ಬಹಳ ಕಷ್ಟ ಎನ್ನತಕ್ಕಂಥದ್ದು ನಮಗೆ ಗೊತ್ತಿದೆ. ನಮ್ಮ ಮಾನ್ಯ ಅಧ್ಯಕ್ಷರಿಗೂ ಕೂಡ ಇದರ ಅನುಭವವಾಗಿದೆ. ಆ ಸ್ಥಾನದಲ್ಲಿ ಕುಳಿತು ಯಾವುದೇ ರೀತಿಯಾದಂಥ ಮುಜುಗರವಾಗಲಿ ಅಥವಾ ಒತ್ತಡವನ್ನು ತಾವು ಅನುಭವಿಸುತ್ತೀರಿ ಎನ್ನತಕ್ಕಂಥದ್ದು ನಮಗೆ ಗೊತ್ತಿದೆ. ಇಡೀ ದೇಶದ ನಾಡಿಯಾಗಿರತಕ್ಕಂಥ ಲೋಕಸಭೆಯ ಅಧ್ಯಕ್ಷ ಸ್ಥಾನವನ್ನು ನಿರ್ವಹಿಸತಕ್ಕಂಥದು ಬಹಳ ಕಷ್ಟಕರವಾದಂಥ ಕೆಲಸ. ಕಳೆದ ನಾಲ್ಕೈದು ವರ್ಷಗಳಲ್ಲಿ ರಾಜಕೀಯ ಸ್ಥಿತ್ಯಂತರ, ರಾಜಕೀಯದ ಇನ್‌ಸ್ಟೆಬಿಲಿಟಿ ಮತ್ತು ಲೋಕಸಭೆಯಲ್ಲಿ ನಡೆಯುವಂಥ ಹಲವಾರು ವಿಷಯಗಳನ್ನು ನೋಡಿದಾಗ ಮಾನ್ಯ ಬಾಲಯೋಗಿಯವರು ಬಹಳ ಸಜ್ಜನಿಕೆಯಿಂದ ಜವಾಬ್ದಾರಿಯಿಂದ ಆ ಕಾರ್ಯವನ್ನು ನಿರ್ವಹಿಸಿಕೊಂಡು ಹೋಗಿರುವಂಥದಕ್ಕೆ ನಾವು ಇಲ್ಲಿ ಅಪ್ರೀಶಿಯೇಟ್ ಮಾಡಬೇಕಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಶ್ರೀಯುತರು ಬಹಳ ಮುಖ್ಯವಾದಂಥ ಕೆಲವೊಂದು ನಿರ್ಣಯಗಳನ್ನು ಕೈಗೊಂಡಿದ್ದಾರೆ. ಹಾಗೆಯೇ ಎಲ್ಲಾ ಮುಖಂಡರುಗಳನ್ನು ಮತ್ತು ಎಲ್ಲಾ ಪಕ್ಷದ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಈ ಒಂದು ಕಾರ್ಯ ನಿರ್ವಹಣೆ ಮಾಡಿರುವಂಥದನ್ನು ನೋಡಿದರೆ, ಅವರ ಎಫಿಶಿಯೆನ್ಸಿ ಏನೆಂಬುದನ್ನು ತಿಳಿದುಕೊಳ್ಳಬಹುದು. ನಮ್ಮ ದೇಶದ

ಇತಿಹಾಸದಲ್ಲಿಯೇ ಮೊದಲಬಾರಿಗೆ, ಸದನದ ನೀತಿ ಸಂಹಿತೆ ಮತ್ತು ಸದನದಲ್ಲಿ ಸದಸ್ಯರು ಯಾವ ವಿಷಯಗಳನ್ನು ಮಾತನಾಡಬೇಕು, ಯಾವರೀತಿ ಮಾತನಾಡಬೇಕೆಂಬುದರ ಬಗ್ಗೆ ಹಾಗೂ ನಡವಳಿಕೆ ಯಾವರೀತಿ ಇರಬೇಕು ಎನ್ನತಕ್ಕಂಥದರ ಬಗ್ಗೆ ಚಿಂತನೆ ಪ್ರಾರಂಭವಾಗಿರತಕ್ಕಂಥದ್ದು ಮಾನ್ಯ ಬಾಲಯೋಗಿಯವರಿಂದ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಎಲ್ಲಾ ಸಭಾಧ್ಯಕ್ಷರು ಮತ್ತು ಕಾನೂನು ಸಚಿವರು ಹಾಗೂ ಸದನದ ಮುಖಂಡರುಗಳನ್ನು ಒಳಗೊಂಡಂತಹ ಒಂದು ಸಭೆಯನ್ನು ಕರೆದು, ಅಪರ ಜೊತೆ ಸದರಿ ವಿಷಯದ ಬಗ್ಗೆ ಸಮಾಲೋಚನೆ ಮತ್ತು ಚಿಂತನೆ ಮಾಡಿದಂಥ ಮೊದಲ ವ್ಯಕ್ತಿ ಮಾನ್ಯ ಬಾಲಯೋಗಿಯವರೆಂದು ಈ ಸಂದರ್ಭದಲ್ಲಿ ನಾನು ನೆನಪಿಸಿಕೊಳ್ಳುತ್ತೇನೆ. ಇವತ್ತಿನ ದಿವಸ ಸದನದ ನೀತಿ ಸಂಹಿತೆ ಬಗ್ಗೆ ದೆಹಲಿಯಿಂದ ಹಿಡಿದು ದೇಶದ ಎಲ್ಲಾ ವಿಧಾನ ಸಭೆಯ ಮಟ್ಟದಲ್ಲಿ ಚಿಂತನೆ ಪ್ರಾರಂಭವಾಗಿದೆ. ಸದನದ ನೀತಿ ಸಂಹಿತೆ ಬಗ್ಗೆ ಚರ್ಚೆ ಮಾಡಲು ಕಳೆದ ವಾರ ನಮ್ಮ ಸನ್ಮಾನ್ಯ ಸಭಾಧ್ಯಕ್ಷರು ಒಂದು ಸಭೆಯನ್ನು ಕರೆದಿದ್ದರು. ಸದರಿ ಸಭೆಗೆ ನಾವೂ ಕೂಡ ಭಾಗವಹಿಸಿದ್ದೆವು. ಇದರ ಬಗ್ಗೆ ಚಿಂತನೆ ಪ್ರಾರಂಭವಾಗಿರತಕ್ಕಂಥದ್ದು ಸ್ವಾಗತಾರ್ಹವಾದುದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಬಾಲಯೋಗಿಯವರು ಏನೊಂದು ಮಾದರಿಯನ್ನು ಹಾಕಿಕೊಟ್ಟಿದ್ದಾರೆ, ಅದನ್ನು ನಾವೆಲ್ಲರೂ ಅನುಕರಣೆ ಮಾಡತಕ್ಕಂಥದ್ದು ಅವಶ್ಯಕತೆ ಇದೆ. ಇವತ್ತಿನ ದಿವಸ ನಾವೆಲ್ಲರೂ ಇದರ ಬಗ್ಗೆ ಚಿಂತನೆ ಮಾಡಬೇಕು ಎನ್ನತಕ್ಕಂಥದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊದಲು ವಕೀಲ ವೃತ್ತಿ ಮಾಡಿ ಅನಂತರ ಲೋಕಸಭೆಯ ಸ್ಪೀಕರ್ ಸ್ಥಾನದಲ್ಲಿದ್ದುಕೊಂಡು ಬಹಳ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿಕೊಂಡು ಹೋಗುತ್ತಿದ್ದ ಮಾನ್ಯ ಬಾಲಯೋಗಿಯವರು ಇವತ್ತಿನದಿವಸ ನಮ್ಮ ನಡುವೆ ಇಲ್ಲ ಎನ್ನತಕ್ಕಂಥದ್ದು ನಮಗೆ ದುಃಖವಾಗಿದೆ. ಹಾಗೆಯೇ ದಲಿತ ಜನಾಂಗದಿಂದ ಲೋಕಸಭೆಗೆ ಪ್ರಥಮ ಅಧ್ಯಕ್ಷರಾಗಿ ಯಶಸ್ವಿಯಾಗಿ ಕೆಲಸ ನಿರ್ವಹಿಸಿದಂಥ ವ್ಯಕ್ತಿ ನಮ್ಮ ಜೊತೆಯಲ್ಲಿ ಇಲ್ಲ. ಶ್ರೀಯುತರ ಅಗಲಿಕೆಯಿಂದ ಆಗಿರತಕ್ಕಂಥ ದುಃಖವನ್ನು ಭರಿಸತಕ್ಕಂಥ ಶಕ್ತಿಯನ್ನು ದೇವರು ಅವರ ಕುಟುಂಬದ ಸದಸ್ಯರಿಗೆ ಮತ್ತು ಎಲ್ಲರಿಗೂ ಕೊಡಲೆಂದು ಈ ಸಂದರ್ಭದಲ್ಲಿ ದೇವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಶ್ರೀಯುತರು ಸಭಾಧ್ಯಕ್ಷರಾಗಿ ಯಾವರೀತಿಯಾಗಿ ನಡೆದುಕೊಂಡಿದ್ದಾರೆಯೋ, ಆ ಮಾದರಿಯನ್ನು ನಾವೆಲ್ಲರೂ ಅನುಸರಿಸಬೇಕು. "A Speaker is one, who speaks less" ಎಂದು ಅವರು ಹೇಳುತ್ತಿದ್ದರು. ಶ್ರೀಯುತರು ಸದನದಲ್ಲಿ ಹೆಚ್ಚಿಗೆ ಮಾತನಾಡುತ್ತಿರಲಿಲ್ಲ. ಕೇವಲ ಸೂಚನೆಗಳ ಮುಖಾಂತರ ಸದನವನ್ನು ಕಂಟ್ರೋಲ್ ಮಾಡುತ್ತಿದ್ದುದ್ದನ್ನು ನಾವು ನೋಡಿದ್ದೇವೆ. ಅವರ ಮಾತಿಗೆ ತಕ್ಕಂತೆ ನಡೆದುಕೊಂಡಂಥ ಆದರ್ಶ ವ್ಯಕ್ತಿ ಮಾನ್ಯ ಬಾಲಯೋಗಿಯವರನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುತ್ತಾ

ಶ್ರೀಯುತರ ಅಗಲಿಕೆಯಿಂದ ಆಗಿರತಕ್ಕಂಥ ದುಃಖವನ್ನು ಭರಿಸತಕ್ಕಂಥ ಶಕ್ತಿಯನ್ನು ದೇವರು ಎಲ್ಲರಿಗೂ ನೀಡಲೆಂದು ಹೇಳುತ್ತೇನೆ. ಹಾಗೆಯೇ, ಇವತ್ತಿನ ದಿವಸ ನಮ್ಮನ್ನು ಬಿಟ್ಟು ಅಗಲಿರತಕ್ಕಂಥ ಶ್ರೀ ಎಸ್.ಶಿವರಾಮ್‌ರವರು ೧೯೮೩ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ಕ್ಷೇತ್ರದಿಂದ ಈ ಸದನಕ್ಕೆ ಆಯ್ಕೆಯಾಗಿ ಬಂದಿದ್ದರು. ಜನಸಂಘದ ಸಕ್ರಿಯ ಕಾರ್ಯಕರ್ತರಾಗಿದ್ದರು. ಹಾಗೆಯೇ ಸಹಕಾರ ಕ್ಷೇತ್ರದಲ್ಲಿಯೂ ಕೂಡ ಕೆಲಸ ಮಾಡಿದಂಥ ವ್ಯಕ್ತಿ ಆಗಿದ್ದರು. ಶ್ರೀಯುತರ ಆತ್ಮಕ್ಕೆ ಶಾಂತಿ ಕೋರುತ್ತಾ ತಾವು ತಂದಿರತಕ್ಕಂಥ ಸಂತಾಪ ಸೂಚನೆಗೆ ನಾನು ಬೆಂಬಲ ವ್ಯಕ್ತಪಡಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಟಿ.ಜಿ.ಆರ್.ಸಿಂಧ್ಯ(ಕನಕಪುರ):- ಸನ್ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿರತಕ್ಕಂಥ ಸಂತಾಪ ಸೂಚನೆಗೆ ಬೆಂಬಲವನ್ನು ಸೂಚಿಸುತ್ತಾ ನಾವೆಲ್ಲರೂ ಕಳೆದುಕೊಂಡಿರುವಂಥ ಶ್ರೀ ಜಿ.ಎಂ.ಸಿ.ಬಾಲಯೋಗಿಯವರ ಜ್ಞಾಪಕಾರ್ಥವಾಗಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ ಮಾನ್ಯ ಬಾಲಯೋಗಿಯವರು ಸ್ವತಃ ರಾಜಕಾರಣವನ್ನು ವೃತ್ತಿಯಾಗಿ ತೆಗೆದುಕೊಂಡವರಲ್ಲ. ಅವರು ವಕೀಲರಾಗಿ ಸರ್ಕಾರದ ಮ್ಯಾಜಿಸ್ಟ್ರೇಟ್ ಆಗಿ ಆಯ್ಕೆಯಾಗಿದ್ದರು. ಶ್ರೀಮಾನ್ ಎನ್.ಟಿ.ರಾಮರಾವ್‌ರವರ ಆಡಳಿತ ಅವಧಿಯಲ್ಲಿ ಅಂದರೆ ೧೯೮೩-೧೯೮೪ರಲ್ಲಿ ಆಂಧ್ರಪ್ರದೇಶದಲ್ಲಿ ಸರ್ಕಾರ ರಚನೆ ಮಾಡಿದಂಥ ಸಂದರ್ಭದಲ್ಲಿ ಬುದ್ಧಿ ಜೀವಿಗಳು ಮತ್ತು ವಿಚಾರವಂತರು ಸಾರ್ವಜನಿಕ ಜೀವನಕ್ಕೆ ಬರಬೇಕೆಂದು ಕರೆ ಕೊಟ್ಟಂಥ ಸಂದರ್ಭದಲ್ಲಿ ಮಾನ್ಯ ಜಿ.ಎಂ.ಸಿ.ಬಾಲಯೋಗಿಯವರು ತಮ್ಮ ಕೆಲಸಕ್ಕೆ ರಾಜಿನಾಮೆ ಕೊಟ್ಟು ರಾಜಕೀಯ ರಂಗದ ಮೂಲಕ ಸಾರ್ವಜನಿಕ ಜೀವನವನ್ನು ಪ್ರವೇಶ ಮಾಡಿದ್ದರು. ವಿಧಿ ಇತ್ತೀಚಿನ ದಿನಗಳಲ್ಲಿ ನಮ್ಮ ರಾಷ್ಟ್ರದ ನಾಯಕರುಗಳ ಬಗ್ಗೆ ಬಹಳ ಕ್ರೂರವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಾರಣ ಏನೆಂದರೆ, ಕಳೆದ ಎರಡೂವರೆ ವರ್ಷಗಳಲ್ಲಿ ಬಹಳಷ್ಟು ಜನ ಪ್ರತಿಭಾವಂತ ನಾಯಕರುಗಳನ್ನು ನಾವು ಕಳೆದುಕೊಂಡಿದ್ದೇವೆ. ಉದಾಹರಣೆಗೆ ಹೇಳುವುದಾದರೆ, ಶ್ರೀಮಾನ್ ಕುಮಾರ್ ಮಂಗಳಂರವರನ್ನು ಮತ್ತು ಶ್ರೀಮಾನ್ ರಾಜೇಶ್ ಪೈಲೆಟ್‌ರವರು ಹಾಗೂ ಶ್ರೀಮಾನ್ ಮಾಧವರಾವ್ ಸಿಂಧ್ಯರವರು ಮತ್ತು ಶ್ರೀಮಾನ್ ಜಿ.ಎಂ.ಸಿ.ಬಾಲಯೋಗಿಯವರೆಲ್ಲರೂ ಸಹಿತ ಪ್ರಗತಿಪರ ಯೋಜನೆ ಮಾಡಿದಂಥ ಜನರು. ಹಾಗೆಯೇ, ಇರತಕ್ಕಂಥ ವ್ಯವಸ್ಥೆಗೆ ಏನಾದರೊಂದು ಬದಲಾವಣೆ ಮಾಡಬೇಕೆಂಬ ಹಂಬಲ ಇಟ್ಟುಕೊಂಡಂಥ ಜನ ಮತ್ತು ಈ ಹಂಬಲವನ್ನು ಕಾರ್ಯಗತ ಮಾಡುವುದರಲ್ಲಿ ಪ್ರಯತ್ನವನ್ನೂ ಸಹಿತ ಮಾಡಿದಂಥ ಜನ. ಇದಕ್ಕೆ ಇತ್ತೀಚಿನ ಉದಾಹರಣೆ ಶ್ರೀಮಾನ್ ಬಾಲಯೋಗಿಯವರಾಗಿದ್ದಾರೆ.

೧೧.೩೦ ಎ.ಎಂ.

ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಹಾಗೆ, ಮಾವಳಂಕರ್‌ರವರು ಕುಳಿತಿರತಕ್ಕಂಥ ಸ್ಥಾನದಲ್ಲಿ ರಾಷ್ಟ್ರಪತಿ ನೀಲಂ ಸಂಜೀವರೆಡ್ಡಿಯವರು ಕುಳಿತಂಥ ಸ್ಥಾನದಲ್ಲಿ ಕರ್ನಾಟಕದ ಕೆ.ಎಸ್. ಹೆಗಡೆಯವರು ಕುಳಿತಂಥ ಸ್ಥಾನದಲ್ಲಿ ಶ್ರೀ ಬಾಲಯೋಗಿಯವರು ತಮ್ಮ ಚಿಕ್ಕ ವಯಸ್ಸಿನಲ್ಲಿ ಆ ಸ್ಥಾನದಲ್ಲಿ ಕುಳಿತಂಥ ಸಂದರ್ಭದಲ್ಲಿ ಅನೇಕ ವಿಚಾರಗಳು ಜನರಲ್ಲಿ ಇದ್ದಂಥದ್ದು ನಿಜ. ಆದರೆ ಅವರು ಅದನ್ನು ಸುಳ್ಳು ಮಾಡಿದರು. ಬಹಳ ಹಿಂದೆ ಲೋಕಸಭೆ, ವಿಧಾನಸಭೆಗಳನ್ನು ನಿಯಂತ್ರಣ ಮಾಡುವುದು ಸುಲಭದ ಕೆಲಸವಾಗಿತ್ತು. ಆದರೆ ಕಳೆದ ಎರಡು ಲೋಕಸಭೆಗಳು ಏನಿವೆ, ಇದರ ರಚನೆ ಬಹಳ ಜಟಿಲವಾಗಿದೆ. ಯಾವುದೇ ಒಂದು ಪಕ್ಷ ತನ್ನ ಒಂದು ಶಕ್ತಿಯ ಆಧಾರದ ಮೇಲೆ ಒಂದು ಸರ್ಕಾರವನ್ನು ರಚನೆ ಮಾಡುವ ಸನ್ನಿವೇಶ ಇಲ್ಲ. ಆ ರೀತಿಯಾಗಿ ನಮ್ಮ ಹೌಸ್ ಕಾಂಪೋಜಿಷನ್ ಇದೆ. ಇಂತಹ ಸಂದರ್ಭದಲ್ಲಿ ಲೋಕಸಭೆಯ ಅಧ್ಯಕ್ಷರಾಗಿ ಅದನ್ನು ನಿಯಂತ್ರಣ ಮಾಡತಕ್ಕಂಥದ್ದು ಬಹಳ ಕಷ್ಟದ ಕೆಲಸ. ಆದರೆ ಶ್ರೀ ಬಾಲಯೋಗಿಯವರು ಎಲ್ಲಾ ಪಕ್ಷಗಳ ಒಂದು ಸಹಕಾರವನ್ನು ಪಡೆದು ಎಲ್ಲಾ ಪಕ್ಷಗಳ ಮೆಚ್ಚುಗೆಗೂ ಪಾತ್ರರಾಗಿದ್ದು ಅವರ ಒಂದು ಸಾವಿನಲ್ಲಿ ಅವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ ಜನರ ಸಂಖ್ಯೆ ಮತ್ತು ಗಣ್ಯರ ಹಾಜರಾತಿಯೇ ಒಂದು ಸಾಕ್ಷಿ ಎಂದು ನಾನು ತಿಳಿದುಕೊಂಡಿದ್ದೇನೆ. ಇನ್ನು ತಾವೆಲ್ಲರೂ ಭಾಗವಹಿಸಿದಂತಹ ಸಭೆಯಲ್ಲಿ ಭಾಗವಹಿಸತಕ್ಕ ಅವಕಾಶ ನನಗೂ ಸಹ ಸಿಕ್ಕಿತು. ಸಂವಿಧಾನದಲ್ಲಿ ಒಂದು ಬದಲಾವಣೆಯನ್ನು ತರಬೇಕು, ನೂರು ದಿನಗಳ ಕಾಲ ಅಧಿವೇಶನ ನಡೆಯಲೇಬೇಕೆಂಬ ಒತ್ತಾಯವನ್ನು ಸಹಿತ ನಾವು ಆ ನಿರ್ಣಯದಲ್ಲಿ ಮಾಡಿದ್ದೇವೆ. ಅದಾದನಂತರ ಸಭೆಯು ನಡೆಯತಕ್ಕಂತಹ ಸಂದರ್ಭದಲ್ಲಿ ಸಭೆಯ ಕಾರ್ಯಕಲಾಪಗಳಿಗೆ ಧರಣಿಯ ಮೂಲಕ ಅಡ್ಡಿಪಡಿಸತಕ್ಕಂತಹವರನ್ನು ಒಂದು ದಿನದ ಮಟ್ಟಿಗೆ ಆಟೋಮ್ಯಾಟಿಕ್ ಆಗಿ ಅವರನ್ನು ಸಭೆಯಿಂದ ಹೊರಗಡೆ ಹಾಕತಕ್ಕಂತಹ ಒಂದು ನಿಯಮಾವಳಿಯನ್ನು ಅವತ್ತು ನಿರ್ಣಯದ ರೂಪದಲ್ಲಿ ಮಾಡಿಸಿ ಲೋಕಸಭೆಯ ನಡವಳಿಕೆಯ ಪುಸ್ತಕದಲ್ಲೂ ಸಹ ಅದು ಬರುವ ಹಾಗೆ ೧೫ ದಿನದೊಳಗಡೆ ಮಾಡಿದಂತಹ ಕೀರ್ತಿ ಶ್ರೀಮಾನ್ ಬಾಲಯೋಗಿಯವರಿಗೆ ಹೋಗಬೇಕಾಗುತ್ತದೆ. ಒಂದು ಹೊಸ ಅಧ್ಯಾಯವನ್ನು ಮಾನ್ಯ ಬಾಲಯೋಗಿಯವರು ಮಾಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಇವತ್ತಿನ ರಾಜಕೀಯ ಪರಿಸ್ಥಿತಿಯಲ್ಲಿ ಯಾವುದೇ ಒಂದು ರಾಷ್ಟ್ರೀಯ ಪಕ್ಷ ನಾವು ಅಧಿಕಾರವನ್ನು ನಾಳೆ ನಡೆಸುತ್ತೇವೆ ಎಂದು ಹೇಳುವಂತಹ ಪರಿಸ್ಥಿತಿಯಲ್ಲಿ ಯಾರೂ ಸಹ ಇಲ್ಲ. ಅಂತಹದರಲ್ಲಿ ಈ ಅಧ್ಯಕ್ಷ ಪೀಠ ಏನಿದೆ, ಇದನ್ನು ನಿಯಂತ್ರಣ ಮಾಡತಕ್ಕಂತದ್ದು ಬಹಳ ಸೂಕ್ಷ್ಮವಾಗಿರತಕ್ಕಂತಹ ವಿಚಾರ, ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರದವರು ಇದನ್ನು ಅರಿತುಕೊಂಡು ನೂರು

ದಿನಗಳ ಕಾಲ ಸದನವು ನಡೆಯುವ ಬಗ್ಗೆ, ಅದನ್ನು ಮಾಡುವ ಬಗ್ಗೆ ಸಂವಿಧಾನದಲ್ಲಿ ತಿದ್ದುಪಡಿಯನ್ನು ತಂದರೆ ಶ್ರೀ ಬಾಲಯೋಗಿಯವರಿಗೆ ಸಲ್ಲಿಸತಕ್ಕಂತಹ ನಿಜವಾದ ಗೌರವವೆಂದು ನಾನು ಭಾವಿಸುತ್ತೇನೆ, ಇದು ಒಂದು ಅಂಶವಾಗಿದೆ. ಇದರ ಬಗ್ಗೆ ನಾವೂ ಸಹಿತ, ನಾಳೆಯ ದಿವಸ ಮಾನ್ಯ ಮುಖ್ಯಮಂತ್ರಿಯವರು ಮಂಡಿಸತಕ್ಕಂಥ ಬಡ್ಜೆಟ್‌ನ್ನು ಸುಮಾರು ೨೪೦೦೦-೦೦ ಕೋಟಿ ರೂಪಾಯಿಗಳಿಗೆ ನಾವು ಮೂರು ದಿನಗಳಲ್ಲಿ ಚರ್ಚೆಯನ್ನು ಮಾಡಿ ಮನ್ನಣೆಯನ್ನು ಕೊಡಬೇಕೆಂದು ಹೇಳಿದರೆ ಇದರ ಬಗ್ಗೆ ಜನಗಳು ಎಷ್ಟರಮಟ್ಟಿಗೆ ನಮ್ಮ ಬಗ್ಗೆ ಅಪಹಾಸ್ಯದಿಂದ ನೋಡುತ್ತಾರೆ ಎನ್ನತಕ್ಕಂಥದ್ದನ್ನೂ ಸಹ ನಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಇಂತಹ ಬಂಧನಗಳು ಮತ್ತು ಇಕ್ಕಟ್ಟುಗಳು ಮತ್ತು ಒತ್ತಡಗಳಲ್ಲಿ ಸದನಗಳನ್ನು ನಡೆಸುವಂತಹದ್ದು ಬಹಳ ಕಷ್ಟಕರವಾದ ಕೆಲಸ. ಆದರೂ ಸಹ ಅದರ ಹೊರತಾಗಿ ಮಾನ್ಯ ಬಾಲಯೋಗಿಯವರು ಒಳ್ಳೆಯ ಕೆಲಸವನ್ನು ಮಾಡಿ ಹೋಗಿದ್ದಾರೆ. ಅವರು ಲೋಕಸಭೆಯ ಅಧ್ಯೆಕ್ಷರಾಗಿ, ಬಹಳ ಚಿಕ್ಕವಯಸ್ಸಿನಲ್ಲಿ ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಮೃತರ ಆತ್ಮಕ್ಕೆ ನಾನು ಶಾಂತಿಯನ್ನು ಕೋರುತ್ತೇನೆ.

ಮಾನ್ಯ ಎನ್.ಶಿವರಾವ್‌ರವರು ೧೯೮೩ರಲ್ಲಿ ಈ ಸಭೆಯ ಸದಸ್ಯರಾಗಿದ್ದರು. ಆಗ ಮಾನ್ಯ ಹೆಗಡೆಯವರ ನಾಯಕತ್ವದಲ್ಲಿ ಅಲ್ಪ ಸಂಖ್ಯಾತ ಬೆಂಬಲದ ಸರ್ಕಾರವಿತ್ತು. ಆಗ ಮಾನ್ಯ ಶಿವರಾವ್‌ರವರು ಭಾರತೀಯ ಜನತಾ ಪಾರ್ಟಿಯಿಂದ ಶಾಸಕರಾಗಿ ಗೆದ್ದು ನಮ್ಮ ಸರ್ಕಾರದ ರಚನೆಗೆ ಸಹಕಾರವನ್ನು ನೀಡಿ, ಒಂದು ಸರ್ಕಾರವನ್ನು ರಚಿಸಲಿಕ್ಕೆ ಸಂಪೂರ್ಣವಾಗಿ ಸಹಕಾರವನ್ನು ಕೊಟ್ಟಿದ್ದರು. ಅವರು ಯಾವತ್ತೂ ಸಹಿತ ಬಹಳ ಸಜ್ಜನರಾದ ವ್ಯಕ್ತಿಗಳಾಗಿದ್ದರು, ಹಾಗು ಬಹಳ ಸೌಮ್ಯ ಸ್ವಭಾವದವರಾಗಿದ್ದರು. ಅವರು ಸತ್ಯವನ್ನು ಹೇಳುವುದಕ್ಕೆ ಯಾವುದನ್ನು ಸಹಿತ ಮರೆಮಾಚುತ್ತಿರಲಿಲ್ಲ. ಅವರ ಬಗ್ಗೆ ನನಗೆ ಗೊತ್ತಿರುವ ಹಾಗೆ ಅವರು ರಾಷ್ಟ್ರೀಯ ಸ್ವಯಂ ಸೇವಾ ಸಂಘದ ಸದಸ್ಯರಾಗಿದ್ದರು, ಅದರ ಜೊತೆಗೆ ಭಾರತೀಯ ಜನಸಂಘದ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್‌ರವರು ಹೇಳಿದ ಹಾಗೆ ಒಬ್ಬ ಸಕ್ರಿಯ ಕಾರ್ಯಕರ್ತರಾಗಿದ್ದರು. ಬಿಜೆಪಿಯ ಒಬ್ಬ ಶಾಸಕರಾಗಿ ಅವರು ಒಳ್ಳೆಯ ಕೆಲಸವನ್ನು ಮಾಡಿದಂತಹ ಒಬ್ಬ ವ್ಯಕ್ತಿಯಾಗಿದ್ದರು. ಸಾಮಾನ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಜನಪ್ರತಿನಿಧಿಗಳು ಮತ್ತು ನಾಯಕರು ಒಂದು ಶಿಸ್ತಿಗೆ ಮತ್ತು ವಿಶಿಷ್ಟತೆಗೆ ಹೆಸರಾದಂತಹ ಪ್ರತಿನಿಧಿಗಳು. ಅವರ ಒಂದು ಸಾಲಿನಲ್ಲಿ ಶಿವರಾವ್‌ರವರೂ ಸಹ ಉತ್ತಮವಾದಂತಹ ಕೆಲಸವನ್ನು ಮಾಡಿದರು. ಅವರ ಮರಣವೂ ಸಹ ಅಕಾಲಿಕ ಎಂದು ನಾನು ತಿಳಿದಿದ್ದೇನೆ. ಅವರ ಆತ್ಮಕ್ಕೂ ಸಹಿತ ಶಾಂತಿಯನ್ನು ಕೋರಿ, ನಾವು ಮಂಡಿಸಿರತಕ್ಕಂತಹ ಸಂತಾಪ ಸೂಚನೆಗೆ ನಮ್ಮ ಪಕ್ಷದ ಪರವಾಗಿ ನಮ್ಮೆಲ್ಲರ ಸಂತಾಪವನ್ನು ಈ ಸಂದರ್ಭದಲ್ಲಿ ಸಲ್ಲಿಸಿ, ನನಗೆ ಮಾತನಾಡಲು ಅವಕಾಶವನ್ನು

ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು.

+ ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಭಾ ನಾಯಕರು ಹಾಗು ತಾವು ಮಂಡಿಸಿದಂತಹ ಸಂತಾಪ ಸೂಚನಾ ನಿರ್ಣಯವನ್ನು ಅನುಮೋದಿಸಿ ಸಭೆಯು ಅಭಿವ್ಯಕ್ತ ಮಾಡಿದಂತಹ ಅಭಿಪ್ರಾಯಗಳನ್ನು ನಾನೂ ಸಹ ಅನುಮೋದನೆ ಮಾಡುತ್ತಾ ಈ ಬಗ್ಗೆ ಮಾನ್ಯ ಸಿಂಧ್ಯಾರವರು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಶ್ರೀಮಾನ್ ಬಾಲಯೋಗಿಯವರು ಲೋಕಸಭೆಯ ಅಧ್ಯಕ್ಷರಾಗಿದ್ದರು ಎನ್ನುವ ಕಾರಣಕ್ಕಾಗಿ ಅಲ್ಲ ಅಧ್ಯಕ್ಷತೆಯ ಹೊಣೆಯನ್ನು ನಿಭಾಯಿಸುವ ರೀತಿ, ಇತ್ತೀಚಿನ ಸಂಸದೀಯ ಬೆಳವಣಿಗೆಗಳು, ಅದಕ್ಕೆ ಕಾಯಕಲ್ಪವನ್ನು ಮಾಡಬೇಕೆಂದು ಹೇಳಿ ಅವರು ದೃಢ ನಿರ್ಧಾರ ಮಾಡಿದ್ದರು. ಆದ್ದರಿಂದ ಆ ನಿರ್ಧಾರಗಳನ್ನು ಜಾರಿಗೆ ತಂದರೆ ನಿಜವಾದ ಸಂತಾಪ ಸೂಚಿಸಿದಂತಾಗುತ್ತದೆ ಎನ್ನುವ ಅಭಿಪ್ರಾಯಕ್ಕೆ ನಾನು ನನ್ನ ಧ್ವನಿಗೂಡಿಸುತ್ತೇನೆ. ಆದರೆ ಒಂದು ಕೈಯಲ್ಲಿ ಚಪ್ಪಾಳೆಯನ್ನು ಹೊಡೆದರೆ ಆಗುವುದಿಲ್ಲ, ಚಪ್ಪಾಳೆಯನ್ನು ಹೊಡೆಯುವುದಕ್ಕೆ ಎರಡೂ ಕೈಗಳು ಸೇರಬೇಕಾಗುತ್ತದೆ. ಎಲ್ಲರಿಗೂ ಆ ಅಭಿಪ್ರಾಯ ಬಂದರೆ ಅವತ್ತು ಸಂಸದೀಯ ಸುಧಿನ ಎಂದು ನಾನು ಭಾವನೆಯನ್ನು ಮಾಡುತ್ತೇನೆ. ಇದರ ಬಗ್ಗೆ ಬೇಕಾಬಿಟ್ಟಿ ವ್ಯಾಖ್ಯಾನಗಳು ಇರುತ್ತದೆ, ಅಭಿಪ್ರಾಯ ಭೇದ ಇರುತ್ತದೆ, ಹಾಗೆಯೇ ಸರ್ಕಾರವನ್ನು ನಡೆಸುವುದರಲ್ಲಿ ತೊಂದರೆಗಳೂ ಸಹ ಇರುತ್ತವೆ. ಈ ಬಾಗ ಮತ್ತು ಆ ಭಾಗದಲ್ಲಿದ್ದು ಅನುಭವಿಸಿರುವವರು ಆ ಮಾತನ್ನು ಹೇಳಿದಾಗ ಮಾತಿಗಾಗಿ ಮಾತನಾಡುತ್ತಾರೇನೋ ಎಂಬ ಶಂಕೆ ಬರುವುದು ಸಹಜ. ಆದ್ದರಿಂದ ತಮ್ಮ ಅನುಭವವನ್ನು ಮತ್ತು ಅದರ ಜೊತೆಗೆ ಆಲೋಚನೆಗಳನ್ನು-ಎರಡನ್ನೂ ಮೇಳೈಸಿದರೆ ಸಂಸದೀಯ ಜೀವನ ಉತ್ತಮವಾಗುವುದಕ್ಕೆ ಖಂಡಿತ ಸಹಕಾರಿಯಾಗುತ್ತದೆ. ಶಾಸನ ಸಭೆಯನ್ನು ೧೦೦ ದಿವಸಗಳ ಕಾಲ ನಡೆಸಬಾರದು ಎಂದು ಯಾರ ಅಭಿಪ್ರಾಯವೂ ಇಲ್ಲ. ಚುನಾವಣೆಯಾಗಿ ನಾವು ಅಧಿಕಾರಕ್ಕೆ ಬಂದ ತಕ್ಷಣವೇ ಮೊದಲ ಸಮ್ಮರಿಯಾಕ್ಷನ್ ಏನು ಎಂದು ಹೇಳಿದರೆ ಶಾಸನ ಸಭೆಯನ್ನು ೧೦೦ ದಿವಸ ನಡೆಸಬೇಕೆಂದು. ನಾವು ಎರಡು ಪ್ರಶ್ನೆಗಳಿಗೆ ಉತ್ತರವನ್ನು ಕೊಡಬೇಕಾಗುತ್ತದೆ. ಏತಕ್ಕಾಗಿ ಶಾಸನ ಸಭೆಯನ್ನು ನಡೆಸಬೇಕು? ಮತ್ತೆ ಹೇಗೆ ನಡೆಸಬೇಕು? ಏಕೆ ನಡೆಸಬೇಕೆಂದು ನಾವು ತೀರ್ಮಾನವನ್ನು ಮಾಡೋಣ. ಹೇಗೆ ನಡೆಸಬೇಕೆಂಬುದು ಮಾನ್ಯ ಅಧ್ಯಕ್ಷರಿಗೆ ಬಿಟ್ಟಿರುವ ವಿಚಾರವಾಗಿದೆ. ೫೦ ವರ್ಷದ ನಮ್ಮ ಅನುಭವದ ಮೇಲೆ ಹೀಗೆ ನಡೆದುಕೊಂಡು ಬರುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿ ಶ್ರೀಮಾನ್ ಬಾಲಯೋಗಿಯವರು ರಾಷ್ಟ್ರೀಯವಾದಂತಹ ಅಭಿಪ್ರಾಯವನ್ನು ರೂಪಿಸುವುದಕ್ಕೆ ಪ್ರಯತ್ನಪಟ್ಟು ಮಾಡಿದರು. ಮೊದಲನೆಯ ಬಾರಿಗೆ ಈ ದೇಶದಲ್ಲಿ ಸಂಸದೀಯ

ವ್ಯವಸ್ಥೆಯ ಬಗ್ಗೆ ಒಂದು ರಾಷ್ಟ್ರೀಯ ವೈಚಾರಿಕವಾದಂತಹ, ವಾಸ್ತವವಾದಂತಹ ಆಲೋಚನೆಯು ನಡೆದದ್ದು ನವೆಂಬರ್ ೨೫ನೇ ತಾರೀಖಿನಂದು ಅದು ಶ್ರೀ ಬಾಲಯೋಗಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ನಾವು ಕಾಯಾವಾಚಾ ಮನಸಾ ಅದನ್ನು ಒಪ್ಪಿ ಇಲ್ಲಿಗೆ ಬಂದ ತಕ್ಷಣ ಹೇಗೆ ಆರಂಭ ಮಾಡಿದೆವು ಎಂದು ಹೇಳಿದರೆ ಡಿಫೈನ್ ಮಾಡವುದರಿಂದಲೇ ಪ್ರಾರಂಭ ಮಾಡಿದೆವು. ಅದರಿಂದ ಎಲ್ಲರೂ ಮಾಡಲಿ, ಅದನ್ನು ನಾವು ಎಷ್ಟರಮಟ್ಟಿಗೆ ಒಪ್ಪಿಕೊಂಡಿದ್ದೇವೆ. ಅದು ಗೊತ್ತಾಗುವುದು ಶಾಸನಸಭೆಗಳು ಮತ್ತು ಲೋಕಸಭೆಗಳು ಸೇರಿದಾಗಲೇ. ಆದ್ದರಿಂದ ಈ ಅಭಿಪ್ರಾಯವನ್ನು ಆಚರಣೆಗೆ ತರುವುದರಲ್ಲಿ ನಾವು ಪ್ರಾಮಾಣಿಕವಾಗಿ ಪ್ರಯತ್ನವನ್ನು ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ನಾನು ಅವರಿಗೆ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ನಾನು ಲೋಕಸಭೆಯ ಸದಸ್ಯನಾಗಿ, ರಾಜ್ಯಸಭೆಯ ಸದಸ್ಯನಾಗಿ, ಇಲ್ಲಿಯೂ ಎರಡು ಸದನಗಳ ಸದಸ್ಯನಾಗಿ ಸಂಸದೀಯ ನಡುವಳಿಕೆಗಳಲ್ಲಿ ಅಲ್ಪಸ್ವಲ್ಪ ಅನುಭವದ ಆಧಾರದ ಮೇಲೆ ಹೇಳುವುದಾದರೆ ಇನ್ನೂ ಪ್ರಜಾಪ್ರಭುತ್ವ ಸಂಸದೀಯ ನಡವಳಿಕೆಗಳು ನಮ್ಮ ದೇಶದಲ್ಲಿ ಗಟ್ಟಿಯಾಗಿಯೇ ಉಳಿದಿವೆ. ಅಲ್ಲಲ್ಲಿ ಸಣ್ಣಪುಟ್ಟ ದೋಷಗಳು ಇರಬಹುದು. ಆದರೆ ಅದನ್ನೇ ದೊಡ್ಡದಾಗಿ ಮಾಡಿಕೊಳ್ಳದೆ ಈ ವ್ಯವಸ್ಥೆಯನ್ನು ಗಟ್ಟಿಗೊಳಿಸುವುದಕ್ಕೆ ಶ್ರೀಮಾನ್ ಬಾಲಯೋಗಿಯವರು ಏನು ಅಡಿಪಾಯವನ್ನು ಹಾಕಿದ್ದಾರೆ ಇದನ್ನು ನಾವೆಲ್ಲಾ ಸೇರಿ, ಜಾರಿಗೊಳಿಸುವುದರ ಮೂಲಕ ಮಾಡೋಣವೆಂದು ಹೇಳಿ ತನ್ಮೂಲಕ ಅವರಿಗೆ ಒಂದು ನಿಜವಾದಂಥ ಸಂತಾಪವನ್ನು ಸೂಚಿಸೋಣ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಸಿ.ಚೆನ್ನಿಗಪ್ಪ(ಕೊರಟಗೆರೆ):-ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಶ್ರೀ ಜಿ.ಎಂ.ಸಿ.ಬಾಲಯೋಗಿಯವರು ರಾಷ್ಟ್ರದಲ್ಲಿಯೇ ಅತ್ಯುತ್ತಮವಾದಂತಹ ಲೋಕಸಭಾ ಅಧ್ಯಕ್ಷರಾಗಿ, ಆಂಧ್ರಪ್ರದೇಶದಲ್ಲಿ ಶಿಕ್ಷಣ ಸಚಿವರಾಗಿ, ಪ್ರಜಾಸತ್ತಾತ್ಮಕ ವಿಚಾರದಲ್ಲಿ ತಮ್ಮದೇ ಆದಂತಹ ಅತ್ಯುತ್ತಮವಾದಂತಹ ಸೇವೆಯನ್ನು ರಾಷ್ಟ್ರಕ್ಕೆ ಸಲ್ಲಿಸಿದ್ದಾರೆ. ಲೋಕಸಭಾ ಅಧ್ಯಕ್ಷರಾಗಿ ಇವರು ಶಿಸ್ತು ಮತ್ತು ಸಂಯಮವನ್ನು ರಾಷ್ಟ್ರಕ್ಕೆ ತಮ್ಮದೇ ಆದಂತಹ ದಿವ್ಯಜ್ಞಾನವನ್ನು ಬಿತ್ತಿ ಲೋಕಸಭೆಯಲ್ಲಿ ಅತ್ಯುತ್ತಮವಾಗಿ ಕೆಲಸವನ್ನು ಮಾಡಿ ಆದರ್ಶಪ್ರಾಯರಾಗಿದ್ದಾರೆ. ಇವತ್ತು ಅವರು ನಮ್ಮ ಕಣ್ಮುಂದೆ ಅದೃಶ್ಯರಾಗಿದ್ದಾರೆ, ಅವರ ಆದರ್ಶ ಜೀವನ ಇಡೀ ರಾಷ್ಟ್ರಕ್ಕೆ ಹಾಗೂ ನಮ್ಮೆಲ್ಲರಿಗೂ ಉದಾಹರಣೆಯಾಗಿ ಉಳಿದಿರಲಿ ಎಂದು ಪರಮಾತ್ಮದಲ್ಲಿ ಪ್ರಾರ್ಥನೆ ಮಾಡುತ್ತೇನೆ. ಅವರು ಚಿಕ್ಕವಯಸ್ಸಿನಲ್ಲಿ ಇಡೀ ರಾಷ್ಟ್ರಕ್ಕೆ ಏನು ಒಂದು ಮಾದರಿಯಾಗಿ ಏನು ಕೆಲಸವನ್ನು ಮಾಡಿದ್ದಾರೆ, ಆ ಒಂದು ಕೆಲಸವನ್ನು ಹಾಗೂ ಅವರ ನಿಜವಾದಂತಹ ಸೇವೆಯನ್ನು ನಾವೆಲ್ಲರೂ ಸ್ಮರಿಸೋಣ. ಇವತ್ತು ಯಾರೇ ಆಗಲಿ ಆ ಸ್ಥಾನದಲ್ಲಿ ಕುಳಿತು ಕೆಲಸವನ್ನು ಮಾಡುವಾಗ ಎಲ್ಲಾ ಪಕ್ಷಗಳ ಹಾಗೂ ಎಲ್ಲಾ ಗಣ್ಯರ ವಿಶ್ವಾಸವನ್ನು ಪಡೆದು

ಕೆಲಸ ಮಾಡಬೇಕಾಗುತ್ತದೆ. ಈ ದಿಸೆಯಲ್ಲಿ ಶ್ರೀ ಬಾಲಯೋಗಿರವರು ಅತ್ಯುತ್ತಮವಾಗಿ ಕೆಲಸವನ್ನು ಮಾಡಿದ್ದಾರೆ. ಅವರ ಈ ಒಂದು ಸೇವೆಯು ಈ ಒಂದು ರಾಷ್ಟ್ರಕ್ಕೆ ನಾಂದಿಯಾಗಿದೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಶ್ರೀಯುತರು ಮೃತರಾಗಿದ್ದು ಅವರ ಕುಟುಂಬಕ್ಕೆ ಪರಮಾತ್ಮನು ದುಃಖವನ್ನು ಸಹಿಸುವಂತಹ ಶಕ್ತಿಯನ್ನು ಕೊಡಲೆಂದು ಹಾಗೂ ಮೃತರಿಗೆ ಶಾಂತಿಯನ್ನು ನೀಡಲೆಂದು ಪರಮಾತ್ಮನಲ್ಲಿ ಪ್ರಾರ್ಥನೆಯನ್ನು ಮಾಡುತ್ತೇನೆ. ಶ್ರೀಯುತರು ಆದರ್ಶಪ್ರಾಯವಾದಂತಹ ಸನ್ಮಾರ್ಗಗಳನ್ನು ಏನು ನಮಗೆ ಕಲಿಸಿಕೊಟ್ಟಿದ್ದಾರೆ, ನಾವೆಲ್ಲರೂ ಅದರ ಹಿಂದೆ ಹೋಗುವಂತಹ ಕೆಲಸವನ್ನು ಮಾಡಬೇಕಾಗುತ್ತದೆ. ಆ ಕೆಲಸವನ್ನು ಮಾಡೋಣವೆಂದು ಹೇಳುತ್ತಾ ಶ್ರೀ ಎನ್.ಶಿವರಾವ್‌ರವರು ಶಾಸಕರಾಗಿ, ರಾಜಕೀಯ ಧುರೀಣರಾಗಿ ದಕ್ಷಿಣ ಕನ್ನಡ ಜಿಲ್ಲೆಯ ನಂದಾವರದಲ್ಲಿ ಜನಿಸಿದ್ದು, ರಾಜಕೀಯ ಕ್ಷೇತ್ರದಲ್ಲಿ ಅತ್ಯುತ್ತಮವಾಗಿ ಕೆಲಸವನ್ನು ಮಾಡಿದ್ದಾರೆ. ಶ್ರೀಯುತರು ರಾಜ್ಯಕ್ಕೆ ಅತ್ಯುತ್ತಮವಾಗಿ ಸೇವೆಯನ್ನು ಸಲ್ಲಿಸಿದ್ದು ಆದರ್ಶಪ್ರಿಯರಾಗಿ ಕೆಲಸ ಮಾಡಿದಂತಹ ಶ್ರೀ ಎನ್.ಶಿವರಾವ್‌ರವರು ನಿಧನ ಹೊಂದಿದ್ದಾರೆ. ಅವರಿಂದಲೂ ಸಹ ಈ ರಾಜಕೀಯ ಕ್ಷೇತ್ರಕ್ಕೆ ಅಪಾರವಾದಂತಹ ನಷ್ಟವಾಗಿದೆ ಎನ್ನುವ ಮಾತನ್ನು ತಿಳಿಸುತ್ತಾ ಅವರ ಆತ್ಮಕ್ಕೆ ಪರಮಾತ್ಮನು ಶಾಂತಿಯನ್ನು ಕೊಡಲೆಂದು ಪ್ರಾರ್ಥನೆಯನ್ನು ಮಾಡುತ್ತೇನೆ. ತಾವು ಇವತ್ತು ತಂದಿರತಕ್ಕಂತಹ ಸಂತಾಪಸೂಚನೆಯ ಬಗ್ಗೆ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದಕ್ಕಾಗಿ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಮೃತರ ಗೌರವಾರ್ಥ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷಗಳ ಕಾಲ ಮೌನವನ್ನಾಚರಿಸಬೇಕೆಂದು ಕೋರುತ್ತೇನೆ.

(ಮಾನ್ಯ ಸದಸ್ಯರೆಲ್ಲರೂ ಎದ್ದುನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು:- ಈ ಸಭೆಯು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬಕ್ಕೆ ಕಳುಹಿಸಿಕೊಡಲಾಗುವುದು. ಈಗ ಸದನವನ್ನು ನಾಳೆ ಬೆಳಿಗ್ಗೆ ೧೧-೦೦ ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಬೆಳಿಗ್ಗೆ ೧೧-೪೫ ಗಂಟೆಗೆ ಮುಂದೂಡಲ್ಪಟ್ಟು ಪುನಃ ದಿನಾಂಕ:೧೯-೦೩-೨೦೦೨ರ ಮಂಗಳವಾರ ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು.)

+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)